# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | 14 |
| **ಮಾನ್ಯ ಸದಸ್ಯರ ಹೆಸರು** | : | ಶ್ರೀ ಎನ್. ರವಿಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| **ವಿಷಯ** | : | ದ್ವೀಪ ಪ್ರವಾಸೋದ್ಯಮದ ಕುರಿತು. |
| **ಉತ್ತರಿಸುವ ಸಚಿವರು** | : | ಪ್ರವಾಸೋದ್ಯಮ ಮತ್ತು ರೇಷ್ಮೆ ಸಚಿವರು |
| **ಉತ್ತರಿಸುವ ದಿನಾಂಕ** | : | 10-12-2018 |

<table>
<tr><th>ಕ್ರ.ಸ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿ ದ್ವೀಪ ಪ್ರವಾಸೋದ್ಯಮಕ್ಕೆ ಯಾವ ಕ್ರಮ ಕೈಗೊಳ್ಳಲಾಗಿದೆ.<br>ಇದಕ್ಕಾಗಿ ಗುರುತಿಸಿರುವ ದ್ವೀಪಗಳು ಯಾವುವು:</td><td>ಕರಾವಳಿ ಪ್ರದೇಶದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಯ ದೃಷ್ಠಿಯಿಂದ ದ್ವೀಪ ಪ್ರವಾಸೋದ್ಯಮಕ್ಕೆ ಪ್ರೋತ್ಸಾಹ ನೀಡಲಾಗುತ್ತಿದೆ, ಹೀಗಾಗಿ ಉಡುಪಿ ಜಿಲ್ಲೆಯ ಸೈಂಟ್ ಮೇರಿಸ್ ದ್ವೀಪದಲ್ಲಿ ಶೌಚಾಲಯ, ಆಸನ ವ್ಯವಸ್ಥೆ, ಗೆಜೆಬೋಗಳನ್ನು ನಿರ್ಮಿಸಲಾಗಿದೆ. ಸದರಿ ಬೀಚ್‌ನಿಂದ ಪ್ರವಾಸಿಗರು ಸೇಂಟ್ ಮೇರಿಸ್ ದ್ವೀಪಕ್ಕೆ ಹೋಗಲು ಜೆಟ್ಟಿ ನಿರ್ಮಿಸಲಾಗಿದೆ. ಈ ಬೀಚ್‌ನಿಂದ ಪ್ರವಾಸಿಗರು ಸೇಂಟ್ ಮೇರಿಸ್ ದ್ವೀಪಕ್ಕೆ ಹೋಗಲು ಮಲ್ಪೆ ಬೀಚ್ ಅಭಿವೃದ್ಧಿ ಸಂಸ್ಥೆಯು ಬೋಟಿಂಗ್ ವ್ಯವಸ್ಥೆ ಕಲ್ಪಿಸಿರುತ್ತದೆ.</td></tr>
<tr><td>(ಆ)</td><td>ರಾಜ್ಯದಲ್ಲಿ ಪ್ರವಾಸೋದ್ಯಮಕ್ಕೆ ಅನುಕೂಲವಾಗುವ ನಿಟ್ಟಿನಲ್ಲಿ ಬೋಟ್ ಹೌಸ್ ಸೌಲಭ್ಯವನ್ನು ಕಲ್ಪಿಸಲಾಗಿದೆಯೇ: ಪ್ರಸ್ತುತ ರಾಜ್ಯದಲ್ಲಿ ಎಲ್ಲೆಲ್ಲಿ ಬೋಟ್ ಹೌಸ್ ಸೌಲಭ್ಯ ಲಭ್ಯವಿದೆ:<br>ಬೋಟ್ ಹೌಸ್‌ಗಳನ್ನು ನಿರ್ಮಿಸಿ ನಿರ್ವಹಿಸುವ ಬಗ್ಗೆ ಸರ್ಕಾರದ ನಿಲುವೇನು:<br>ಖಾಸಗಿಯವರು ಬೋಟ್ ಹೌಸ್ ಹೊಂದಿರುವ ಬಗ್ಗೆ ಸರ್ಕಾರಕ್ಕೆ ಮಾಹಿತಿ ಇದೆಯೇ: ಖಾಸಗಿಯವರು ಬೋಟ್ ಹೌಸ್ ಹೊಂದಲು ಸರ್ಕಾರ ಪ್ರೋತ್ಸಾಹ ನೀಡುತ್ತಿದೆಯೇ: ರಾಜ್ಯದಲ್ಲಿ ಬೋಟ್ ಹೌಸ್‌ಗಳಿಗೆ ಪರವಾನಿಗೆ ನೀಡಲಾಗಿದೆಯೇ:</td><td>ಹೌದು, ಉಡುಪಿ ಜಿಲ್ಲೆ, ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿಗಳ ಮೂಲಕ ಕೆಳಕಂಡ ಸ್ಥಳಗಳಲ್ಲಿ ಹೌಸ್ ಬೋಟ್‌ಗಳನ್ನು/ಕ್ರೂಸ್ ರೆಸ್ಟೋರೆಂಟ್‌ಗಳನ್ನು ನಡೆಸಲು ಅನುಮತಿ ನೀಡಲಾಗಿದೆ.
<table>
<tr><th>ಕ್ರ.ಸ</th><th>ಹೌಸ್ ಬೋಟ್ ಸಂಸ್ಥೆಯ ಹೆಸರು</th><th>ಹೌಸ್ ಬೋಟ್ ನಡೆಸುತ್ತಿರುವ ಸ್ಥಳ</th></tr>
<tr><td></td><td>ಉಡುಪಿ ಜಿಲ್ಲೆ</td><td></td></tr>
<tr><td>1</td><td>ಮೆ:ಪಾಂಚಜನ್ಯಕ್ರೂಸ್ ಹೌಸ್ ಬೋಟ್, ಪಡುತೋನ್ಸೆ, ಪಡುಕೆರೆ.</td><td>ಸ್ವರ್ಣ ನದಿ</td></tr>
<tr><td>2</td><td>ಮೆ॥ ಪಯಣ ಟೂರಿಸ್ಟ್‌ಬೋಟ್</td><td>ಹೂಡೆ</td></tr>
<tr><td>3</td><td>ಮೆ॥ ತಿರುಮಲ ಕ್ರೂಸ್ ಹೌಸ್ ಬೋಟ್ ಸಂತೆಕಟ್ಟೆ,</td><td>ಸಂತೆಕಟ್ಟೆ</td></tr>
<tr><td></td><td>ದಕ್ಷಿಣ ಕನ್ನಡ ಜಿಲ್ಲೆ</td><td></td></tr>
<tr><td>1</td><td>ಮೆ॥ ಲೀಸರ್ ರೋಡ್ಸ್,</td><td>ಕೂಳೂರು-ಫಾಲ್ಗುಣಿ ನದಿ</td></tr>
<tr><td>2</td><td>ಮೆ॥ ಲೀಸರ್ ರೂಟ್ಸ್, (ರೋಶನ್ ಪಿಂಟೋ)</td><td>ನೇತ್ರಾವತಿ ನದಿ, ಮಂಗಳೂರು</td></tr>
<tr><td>3</td><td>ಸ್ಟಾರ್ ಕ್ವೀನ್ (ಕ್ರೂಸ್ ರೆಸ್ಟೋರೆಂಟ್)</td><td>ಹಳೆ ಬಂದರು</td></tr>
<tr><td>4</td><td>ರೂಪಶ್ರೀ ದರ್ಮಯ್ಯ(ಕ್ರೂಸ್ ರೆಸ್ಟೋರೆಂಟ್)</td><td>ಬೋಲೂರು-ಸುಲ್ತಾನ ಬತ್ತೇರಿ</td></tr>
<tr><td>5</td><td>ಲೀಸರ್ ರೂಟ್ಸ್, (ರೋಶನ್ ಪಿಂಟೋ) (ಕ್ರೂಸ್ ರೆಸ್ಟೋರೆಂಟ್)</td><td>ನಂದಿನಿ ನದಿ (ಸಸಿಹಿತ್ಲು)</td></tr>
</table>
</td></tr>
</table>

| | | |
|---|---|---|
| (ಇ) | ರಾಜ್ಯವು ಅತಿ ದೊಡ್ಡ ಪ್ರಮಾಣದಲ್ಲಿ ಕಡಲ ತೀರವನ್ನು ಹೊಂದಿದ್ದು, ಈ ಕಡಲ ತೀರದಲ್ಲಿ ಪ್ರವಾಸೋದ್ಯಮ ಚಟುವಟಿಕೆಗಳನ್ನು ಉತ್ತೇಜಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು: ರಾಜ್ಯದ ಕಡಲ ತೀರಗಳನ್ನೂ ಸಹ ಗೋವಾ ಮಾದರಿಯಲ್ಲಿ ಪ್ರವಾಸಿಗಳ ಆಕರ್ಷಣೀಯ ಪ್ರೇಕ್ಷಣೀಯ ಸ್ಥಳವನ್ನಾಗಿ ರೂಪಿಸಲು ಸರ್ಕಾರದ ಮುಂದಿರುವ ಯೋಜನೆಗಳಾವುವು: | ದಕ್ಷಿಣಕನ್ನಡ, ಉತ್ತರಕನ್ನಡ ಹಾಗೂ ಉಡುಪಿ ಜಿಲ್ಲೆಗಳಿರುವ 22 ಪ್ರಮುಖ ಬೀಚ್‌ಗಳಲ್ಲಿ ಸಂಪರ್ಕ ರಸ್ತೆ, ಅಸನ ಸೌಲಭ್ಯ, ಸೇಲ್ಟರ್, ವಾಚ್ ಟವರ್ ಪಾರ್ಕಿಂಗ್ ಸೌಲಭ್ಯ, ಪಾತ್‌ವೇ, ಐಮಾಸ್ ಲೈಟಿಂಗ್ ಮುಂತಾದ ಸೌಲಭ್ಯಗಳನ್ನು ರೂ.50.00 ಕೋಟಿಗಳ ಅಂದಾಜು ಮೊತ್ತದಲ್ಲಿ ಕಲ್ಪಿಸಲು ಕೇಂದ್ರ ಪ್ರವಾಸೋದ್ಯಮ ಮಂತ್ರಲಾಯವು ಮಂಜೂರಾತಿ ನೀಡಿ ರೂ.10.00 ಕೋಟಿಗಳನ್ನು ಮಾತ್ರ ಬಿಡುಗಡೆ ಮಾಡಿರುತ್ತದೆ. ರಾಜ್ಯದ ಅನುದಾನವು ಸೇರಿದಂತೆ ಒಟ್ಟು 35.42 ಕೋಟಿಗಳನ್ನು ಅನುಸ್ಠಾನ ಸಂಸ್ಥೆಯಾದ ಕೆ.ಆರ್.ಐ.ಡಿ.ಎಲ್ ಸಂಸ್ಥೆಗೆ ಬಿಡುಗಡೆ ಮಾಡಲಾಗಿದೆ. ಇದುವರೆಗೆ ರೂ.24.15 ಕೋಟಿ ಮೊತ್ತದಷ್ಟು ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ. ಕಾಮಗಾರಿಗಳು ವಿವಿಧ ಹಂತದಲ್ಲಿರುತ್ತವೆ. ಕಡಲ ತೀರಗಳಲ್ಲಿ ಖಾಯಂ ನಿರ್ಮಾಣಗಳನ್ನು ಕೈಗೊಳ್ಳಲು ಸಿ.ಆರ್.ಜೆಡ್. ನಿಯಮಗಳಲ್ಲಿ ಅವಕಾಶ ಇರುವುದಿಲ್ಲ. ಸಿ.ಆರ್.ಜೆಡ್. ನಿಯಮಗಳನ್ನು ಸಡಿಲಿಸಲು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. |
| (ಈ) | ರಾಜ್ಯಕ್ಕೆ ಪ್ರವಾಸೋದ್ಯಮದಿಂದ ಬರುವ ಒಟ್ಟಾರೆ ಆದಾಯವೆಷ್ಟು: ಪ್ರವಾಸೋದ್ಯಮದಿಂದ ರಾಜ್ಯದಲ್ಲಿ ಸೃಷ್ಠಿಯಾಗುತ್ತಿರುವ ನೇರ ಮತ್ತು ಪರೋಕ್ಷ ಅಂದಾಜು ಉದ್ಯೋಗಗಳ ಸಂಖ್ಯೆ ಎಷ್ಟು: ಪ್ರವಾಸೋದ್ಯಮಕ್ಕೆ ಪ್ರೋತ್ಸಾಹ ನೀಡುವುದರ ಮೂಲಕ ನಿರುದ್ಯೋಗ ಸಮಸ್ಯೆ ಪರಿಹಾರಕ್ಕೆ ಸರ್ಕಾರ ಪ್ರಯತ್ನಿಸುತ್ತಿದೆಯೇ: ಇದಕ್ಕೆ ಯಾವ ರೀತಿ ಯೋಜನೆ ಮಾಡಲಾಗಿದೆ? | ಪ್ರವಾಸೋದ್ಯಮದಿಂದ ಇಲಾಖೆಗೆ/ಸರ್ಕಾರಕ್ಕೆ ನೇರವಾದ ಆದಾಯ ಲಭ್ಯವಾಗುವುದಿಲ್ಲ. ಪರೋಕ್ಷ ಆದಾಯವನ್ನು ಹಾಗೂ ಅತ್ಯಮೂಲವಾದ ವಿದೇಶಿ ವಿನಿಮಯವನ್ನು ಮಾತ್ರ ಗಳಿಸಲು ಸಾಧ್ಯವಾಗುತ್ತದೆ. ಪ್ರವಾಸೋದ್ಯಮದಿಂದಾಗಿ ಸಾಮಾಜಿಕ ಆರ್ಥಿಕ ಅಭಿವೃದ್ಧಿ ಸಾಧ್ಯವಾಗುತ್ತದೆ ಪ್ರವಾಸೋದ್ಯಮವು ಉದ್ಯೋಗ ಸೃಷ್ಟಿಯಲ್ಲಿ ಮಂಚೂಣಿಯಲ್ಲಿರುವ ಉದ್ಯಮವಾಗಿರುತ್ತದೆ. ನೂತನವಾಗಿ ಸೃಷ್ಟಿಯಾಗುತ್ತಿರುವ ಪ್ರತಿ ಹತ್ತು ಉದ್ಯೋಗಾವಕಾಶಗಳಲ್ಲಿ ಒಂದು ಉದ್ಯೋಗ ಪ್ರವಾಸೋದ್ಯಮ ಕ್ಷೇತ್ರದ ಕೊಡುಗೆ ಆಗಿರುತ್ತದೆ. |

ಪ್ರಇ 97 ಪ್ರವಾವಿ 2018

(ಸಾ.ರಾ.ಮಹೇಶ್)

ಪ್ರವಾಸೋದ್ಯಮ ಮತ್ತು ರೇಷ್ಮೆ ಸಚಿವರು